ಓ ಎಸ್ ನಂ. 20/2022
ಡಿ ಡಬ್ಲ್ಯು 1
ದಿನಾಂಕ 21/04/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ ಡಿ ಎಸ್ ವಕೀಲರಿಂದಃ

ನನ್ನ ಮಾವ ಸೋಮಶೇಖರಯ್ಯರವರು 2014 ರಲ್ಲಿ ಸೇವಾ ನಿವೃತ್ತಿ ಹೊಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಗಗನ್ ದೀಪ್ ಎಂಬ ಒಬ್ಬ ಮಗ ಇದ್ದ ಎಂದರೆ ಸರಿ. ಆ ಸಮಯದಲ್ಲಿ ನನ್ನ ಮಗನಿಗೆ ಒಂದು ವರ್ಷ ವಯಸ್ಸಾಗಿತ್ತು ಎಂದರೆ ಸರಿ. ದಿನಾಂಕ 01/10/2014 ರಂದು ನನ್ನ ಮಾವ ಅರ್ಜಿ ನೀಡಿ ಜೀವಂತ ಸದಸ್ಯರ ದೃಡೀಕರಣ ಪತ್ರವನ್ನು ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆ ನಿಪಿ-22 ಆಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ಮಾವ ಅವರ ಕುಟುಂಬದ ಎಲ್ಲಾ ಸದಸ್ಯರ ಹೆಸರುಗಳನ್ನು ನಮೂದು ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-22 ರ ಕುಟುಂಬದ ಸದಸ್ಯರ ಪ್ರಮಾಣ ಪತ್ರದಲ್ಲಿ ಯಾರ ಯಾರ ಹೆಸರು ಇದೆ ಎಂದು ಓದಿ ಹೇಳಲು ಕೇಳಲಾಗಿ ಸಾಕ್ಷಿ ಅದರಲ್ಲಿ ನನ್ನ ಮಾವ ಸೋಮಶೇಖರಯ್ಯ, ಅತ್ತೆ ಕೊಟ್ಟೂರಮ್ಮ, ಮಮತಾ, ನನ್ನ ಗಂಡ ಅನೀಲ್ ಕುಮಾರ್, ನನ್ನ

ಹೆಸರು ಮತ್ತು ನನ್ನ ಮಗ ಗಗನ್ ದೀಪ್ ರವರ ಹೆಸರು ಇದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ಮಾಡಿಸುವ ಸಮಯದಲ್ಲಿ ನನ್ನ ಇನ್ನೊಬ್ಬ ಮಗ ಚಿರಂತ್ ಸೂರ್ಯ ಜನಿಸಿರಲಿಲ್ಲ ಎಂದರೆ ಸರಿ. ನಿಪಿ-22 ರಲ್ಲಿ ನನ್ನ ಕುಟುಂಬದ ಎಲ್ಲಾ ಸದಸ್ಯರ ಹೆಸರು ನಮೂದು ಇರುವುದರಿಂದ ಸದರಿ ದಾಖಲೆ ನಮ್ಮ ಕುಟುಂಬಕ್ಕೆ ಸೇರಿದ ದಾಖಲೆ ಆಗಿರುತ್ತದೆ ಎಂದರೆ ಸಾಕ್ಷಿ ಅದನ್ನು ನಾನು ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-23 ರ ಶಾಲಾ ದಾಖಲಾತಿಯಲ್ಲಿ ವಾದಿ ಮಮತಾರವರ ಹೆಸರು ನಮೂದು ಇದ್ದು, ಅವರ ತಂದೆಯ ಹೆಸರು ಸೋಮಶೇಖರಯ್ಯ ಮುದ್ದೇನಹಳ್ಳಿ ಎಂದು ನಮೂದು ಇದೆ ಎಂರದೆ ಸಾಕ್ಷಿ ನಮೂದು ಇದೆ ಆದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮಾವ ಸೋಮಶೇಖರಯ್ಯರವರ ಊರು ಮುದ್ದೇನಹಳ್ಳಿ ಎಂದರೆ ಸರಿ. ವಾದಿಯ ಹೆಸರು ಮಮತಾ ಎಂ ಎಸ್ ಎಂದು ಇದ್ದು ಅವರ ಸಂಪೂರ್ಣ ಹೆಸರು ಮುದ್ದೇನಹಳ್ಳಿ ಸೋಮಶೇಖರ್ ರವರ ಮಗಳು ಮಮತಾ ಎಂದರೆ ಸಾಕ್ಷಿ ನಾನು ಅದನ್ನು ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ಸದರಿ ಸೋಮಶೇಖರಯ್ಯ ಎನ್ನುವವರು ಬೇರೆಯವರ ಎಂದರೆ ಸಾಕ್ಷಿ ಇದ್ದರೂ ಇರಬಹುದು ಎಂದು ನುಡಿಯುತ್ತಾರೆ. ಮುದ್ದೇನಹಳ್ಳಿಯಲ್ಲಿ ಸೋಮಶೇಖರಯ್ಯ ಎಂಬುವವರು ಎಷ್ಟು ಜನ ಇದ್ದಾರೆ ಎಂದರೆ ಸಾಕ್ಷಿ ನಾನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಮುದ್ದೇನಹಳ್ಳಿ ಸಣ್ಣ ಗ್ರಾಮವಾಗಿದ್ದು ಸುಮಾರು

ಎಷ್ಟು ಮನೆ ಇದೆ ಎಂದರೆ ಸಾಕ್ಷಿ ಸುಮಾರು 200 ಮನೆ ಇರಬಹುದು ಎಂದು ನುಡಿಯುತ್ತಾರೆ. ನಾನು ಮದುವೆಯಾದಾಗಿನಿಂದಲೂ ಸಹ ಮುದ್ದೇನಹಳ್ಳಿಯಲ್ಲಿ ವಾಸ ಇದ್ದೇನೆ. ನನ್ನ ಮಾವ ಅರ್ಜಿ ನೀಡಿದ್ದರಿಂದಲೇ ನಿಪಿ-22 ರಂತೆ ದಾಖಲೆಯನ್ನು ತಹಸೀಲ್ದಾರ್ ರವರು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾರಾದರೂ ಅರ್ಜಿ ಸಲ್ಲಿಸಿದರೆ ಮಾತ್ರ ದೃಡೀಕರಣವನ್ನು ನೀಡುತ್ತಾರೆ ಎಂದರೆ ಸರಿ. ನನ್ನ ಮಾವ ನಿವೃತ್ತಿ ಹೊಂದಿದ ನಂತರದಲ್ಲಿ ಕುಟುಂಬ ಸದಸ್ಯರ ದೃಡೀಕರಣ ಪತ್ರ ಕೋರಿ ಮಾನ್ಯ ತಹಸೀಲ್ದಾರ್ ರವರಿಗೆ ಅರ್ಜಿ ನೀಡಿದ್ದು ಅದರಂತೆ ನಿಪಿ-22 ರ ದಾಖಲೆಯನ್ನು ನೀಡಲಾಗಿದೆ ಎಂದರೆ ಸಾಕ್ಷಿ ನನ್ನ ಮಾವ ಅರ್ಜಿ ನೀಡಿದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ಸೋಮಶೇಖರಯ್ಯರವರ ಮಗಳಾಗಿದ್ದು ಅವರಿಗೆ ಆಸ್ತಿ ಬಿಟ್ಟುಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ವಾದಿ ಸೋಮಶೇಖರಯ್ಯರವರ ಮಗಳು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸೋಮಶೇಖರಯ್ಯರವರಿಗೆ ನನ್ನ ಗಂಡ ಒಬ್ಬನೇ ಮಗ ಮಾತ್ರ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಮೂರು ಭಾವಚಿತ್ರಗಳನ್ನು ತೋರಿಸಿ ಅದರಲ್ಲಿ ಕಾಣುವಂತೆ ಸದರಿ ಭಾವಚಿತ್ರಗಳು ನನ್ನ ಮದುಗೆಯ ಸಮಯದಲ್ಲಿ ತೆಗೆದಿದ್ದು ಅದರಲ್ಲಿ ನಾನು ಮತ್ತು ನನ್ನ ಗಂಡ ಇಬ್ಬರು

ಉಪಸ್ಥಿತರಿದ್ದೇವೆ ಎಂದರೆ ಸಾಕ್ಷಿ ನನ್ನ ಮದುವೆಯ ಸಮಯದಲ್ಲಿ ಯಾವುದೇ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ, ಸದರಿ ಭಾವಚಿತ್ರಗಳನ್ನು ಸೃಷ್ಟಿಸಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪುನಃ ಸದರಿ ಭಾವಚಿತ್ರಗಳಲ್ಲಿ ಹೂವಿನ ಹಾರ ಹಾಕಿಕೊಂಡು ನಿಂತಿರುವ ವ್ಯಕ್ತಿ ತನ್ನ ಗಂಡ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ. ಸದರಿ ಭಾವಚಿತ್ರಗಳಲ್ಲಿ ತನ್ನ ಗಂಡ ಇರುವುದನ್ನು ಒಪ್ಪಿರುವುದರಿಂದ ಸದರಿ ಭಾವಚಿತ್ರಗಳನ್ನು **ನಿಪಿ-25 ರಿಂದ 27** ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳಲ್ಲಿ ಹೂವಿನ ಹಾರ ಹಾಕಿಕೊಂಡಿರುವ ವ್ಯಕ್ತಿ ನಾನೇ ಆಗಿರುತ್ತೇನೆ ಎಂದು ಕೇಳಲಾಗಿ ಸಾಕ್ಷಿ ಅದು ನಾನಲ್ಲ ನನ್ನಂತಹ ಬೇರೊಬ್ಬರು ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಪುನಃ ಮತ್ತೊಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿ ಕಾಣುತ್ತಿರುವಂತಹ ವ್ಯಕ್ತಿ ನನ್ನ ಮಾವ ಆಗಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-20 ರ ಫೋಟೋವನ್ನು ತೋರಿಸಿ ಅದರೊಂದಿಗೆ ಮೇಲೆ ಹೇಳಲಾದ ಭಾವಚಿತ್ರವನ್ನು ಸಹ ತೋರಿಸಿ ಅದರಲ್ಲಿ ಕಾಣುವಂತೆ ಎರಡೂ ಭಾವಚಿತ್ರಗಳಲ್ಲಿ ನನ್ನ ಮಾವ ಇದ್ದಾರೆ ಎಂದರೆ ಸಾಕ್ಷಿ ಅದೇರೀತಿ ಇರಬಹುದು ಆದರೆ ಸದರಿ ಭಾವಚಿತ್ರವನ್ನು ನಾನು ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-22 ಮತ್ತು 23 ರ ದಾಖಲೆಗಳಂತೆ ವಾದಿ ಸೋಮಶೇಖರಯ್ಯರವರ ಮಗಳು ಎಂದು ದೃಢಪಟ್ಟರೂ ಸಹ

ವಾದಿಗೆ ಆಸ್ತಿ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ ಸೋಮಶೇಖರಯ್ಯರವರ ಮಗಳು ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಗೂ ಸಹ ಸಮ ಭಾಗದ ಹಕ್ಕು ಇದೆ ಎಂದರೆ ಸಾಕ್ಷಿ ವಾದಿ ಸೋಮಶೇಖರಯ್ಯರವರ ಮಗಳಾಗದೆ ಇರುವುದರಿಂದ ಅವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.